ದಿ: 23.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ. ಆರ್. ವಿ. ವಕೀಲರಿಂದ:-**

1. ದಾವಾ ಸ್ವತ್ತು ನನಗೆ ತಿಳಿದಿರುತ್ತದೆ. ಅದು 3 ಎಕರೆ 29 ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಸಂಬಂಧ ವಾದಿ ಹಾಗೂ ಪ್ರತಿವಾದಿಯರ ನಡುವೆ ಕರಾರು ಆಗಿರುತ್ತದೆ ಎಂದರೆ ಸರಿ. ಆ ಸಂಬಂಧ ವಾದಿ ಈ ದಾವೆ ಹೂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನಾನು ವಕೀಲರ ಸಲಹೆ ಪಡೆದಿರುತ್ತೇನೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕ್ರಯಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನಾನು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲ. ದಾವಾ ಸ್ವತ್ತು ವಾದಿಯ ಸ್ವತ್ತಿಗೆ ಲಗತ್ತಾಗಿರುತ್ತದೆ ಎಂದರೆ ಸರಿ. ವಾದಿ ಬೃಹತ್ ರೇಷ್ಮೆ ಫ್ಯಾಕ್ಟರಿಯನ್ನು ನಡೆಸುತ್ತಿರುತ್ತಾರೆ ಎಂದರೆ ಸರಿ. ಆತ ಶ್ರೀಮಂತ ಎಂದರೆ ನನಗೆ ತಿಳಿದಿಲ್ಲ. ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನಾನು ವಾದಿಯೊಂದಿಗೆ ಚರ್ಚೆ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು, ನಾನು ಜಮೀನಿನ ಮಾಲೀಕರೊಂದಿಗೆ ಚರ್ಚೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿ ಹಾಗೂ ಮೃತ 1ನೇ ಪ್ರತಿವಾದಿಯ ನಡುವಿನ ಕರಾರಿನ ಸಂಗತಿ ನನಗೆ ತಿಳಿದಿದ್ದರೂ ನಾನು ದಾವಾ ಸ್ವತ್ತಿನ ಒಂದು ಎಕರೆ ಸ್ವತ್ತನ್ನು ಮೃತ 1ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು, ಸದರಿ ವಾದಿ ಹಾಗೂ ಮೃತ 1ನೇ ಪ್ರತಿವಾದಿ ನಡುವಿನ ಕರಾರನ್ನು ಇಬ್ಬರೂ ರದ್ದು ಪಡಿಸಿ ಮೂಲ ಕರಾರನ್ನು ಹರಿದು ಹಾಕಿರುವುದಾಗಿ ತಿಳಿಸಿದ ಕಾರಣ ನಾನು ಸದರಿ ಕ್ರಯ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ನನ್ನ ತಕರಾರನ್ನು ಸಲ್ಲಿಸಿರುತ್ತೇನೆ. ಸದರಿ ಸಂಗತಿಯನ್ನು ನಾನು ನನ್ನ ತಕರಾರಿನಲ್ಲಿ ಬರೆಸಿರುತ್ತೇನೆ.

2. ನಾನು ಆನೇಕಲ್ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದ ಓ.ಎಸ್. ಸಂ.:240/2007 ದಾವೆಯಲ್ಲಿ ಮೇಲಿನ ಸಂಗತಿಯನ್ನು ತಿಳಿಸಿದ್ದೇನೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಮುಂದುವರೆದು, ಜಮೀನಿನ ಮಾಲೀಕರು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಬರ್ ಪೋಡು ಆಗಿರುತ್ತದೆ. ನಾನು ಖರೀದಿಸಿದ 1 ಎಕರೆ ಜಮೀನಿಗೆ ಸರ್ವೆ ನಂ.412/2 ಎಂದು

ಹೊಸ ನಂಬರ್ ನೀಡಿರುತ್ತಾರೆ. ನಿ.ಡಿ.34, 38, 39 ಹಾಗೂ 44ರಲ್ಲಿ ಕಂಡುಬರುವ ಸ್ವತ್ತು ವಾದಿಯ ಫ್ಯಾಕ್ಟರಿ ಆಗಿರುತ್ತದೆ ಎಂದರೆ ಸರಿ.

3. ನಿ.ಪಿ.5 ಕರಾರಿನ ಅಡಿಯಲ್ಲಿ ವಾದಿ ಈ ನ್ಯಾಯಾಲಯದಲ್ಲಿ ಬಾಕಿ ಮುದ್ರಾಂಕ ಶುಲ್ಕ ಹಾಗೂ ದಂಡವನ್ನು ಪಾವತಿಸಿರುತ್ತಾರೆ ಎಂದರೆ ಸರಿ. ನಾನು 1ನೇ ಪ್ರತಿವಾದಿಯಿಂದ ಸ್ವತ್ತನ್ನು ಖರೀದಿಸುವ ಸಮಯ ಆತನಿಂದ ಸ್ವತ್ತಿನ ಸಂಬಂಧ ಋಣಭಾರ ಪ್ರಮಾಣ ಪತ್ರ, ಕಂದಾಯ ರಸೀದಿಗಳು, ಪಹಣಿ, ಮ್ಯುಟೇಷನ್, ವಂಶವೃಕ್ಷ ಹಾಗೂ ಇತರೆ ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ವಂಶವೃಕ್ಷವನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಿ.ಡಿ.22 ರಿಂದ ನಿ.ಡಿ.25ರಲ್ಲಿ ಕಲಂ.9 ಹಾಗೂ 12ರಲ್ಲಿ ಮೃತ ಮೂಲ 1ನೇ ಪ್ರತಿವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಖರೀದಿ ಸಮಯ ಮೂಲ 1ನೇ ಪ್ರತಿವಾದಿಯ ವಾರಸ್ದಾರರ ಹೆಸರಿನಲ್ಲಿ ಯಾವುದೇ ಕಂದಾಯ ದಾಖಲೆಗಳು ಇರಲಿಲ್ಲ ಎಂದರೆ ಸರಿ.

4. ವಾದಿಯ ಪಾಟೀ ಸವಾಲಿನ ಸಮಯ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆನು ಎಂದರೆ ಸರಿ. 1ನೇ ಪ್ರತಿವಾದಿಯ ಪರ ಈ ನ್ಯಾಯಾಲಯದಲ್ಲಿ ಯಾವ ವಕೀಲರು ಹಾಜರಿರುತ್ತಾರೆ ನನಗೆ ತಿಳಿದಿರುತ್ತದೆ, ಆದರೆ ಅವರ ಹೆಸರು ನನಗೆ ತಿಳಿದಿಲ್ಲ. ನಿ.ಪಿ.5 ಕರಾರು ಬಾಕಿ ಇರುವ ಸಂಗತಿ ನನಗೆ ತಿಳಿದಿದ್ದರೂ ವಾದಿಗೆ ಮೋಸ ಮಾಡಲು ಮೃತ 1ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ನಿ.ಡಿ.6 ಕ್ರಯಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.6ರ ಆಧಾರದ ಮೇಲೆ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಕಂದಾಯ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅವುಗಳ ಆಧಾರದ ಮೇಲೆ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತನ್ನು ಪೋಡಿ ಮಾಡುವ ಪೂರ್ವದಲ್ಲಿ ವಾದಿಗೆ ನೋಟಿಸನ್ನು ನೀಡಿರುತ್ತಾರೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ವಾದಿಗೆ ತಿಳಿಯದ ಹಾಗೇ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ಹಾಗೂ ಇತರೆ ಪ್ರತಿವಾದಿಯರು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ ವಾದಿ ದಾವಾ ಸ್ವತ್ತಿನ ಸಂಪೂರ್ಣ

ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಜ ಸಂಗತಿಗಳು ನನಗೆ ತಿಳಿದಿದ್ದರೂ ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**